ಆಧ್ಯಾತ್ಮಿಕ ಉಪಾಯ : ನಿವಾಳಿಸುವುದು

# ನಿವಾಳಿಸುವುದು ಮತ್ತು ಮಾನಸ ದೃಷ್ಟಿ

## (ವಾಸ್ತು, ವಾಹನ ಮತ್ತು ಗಿಡಗಳಿಗೆ ದೃಷ್ಟಿ ತಗಲಬಾರದೆಂದು ಮಾಡುವ ಉಪಾಯಗಳೊಂದಿಗೆ)

(Waving around a possessed person to eject negative energies and casting off the evil-eye mentally) ಕನ್ನಡ (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರದ ಸ್ಥಾಪನೆಯ ಉದ್ಘೋಷಕರು**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಸೂಕ್ಷ್ಮಜ್ಞಾನ ಪಡೆದವರು**

**ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ ಮತ್ತು ಇತರರು**



**ಸನಾತನ ಸಂಸ್ಥೆ**


**ಸನಾತನದ ಗ್ರಂಥಸಂಪತ್ತಿನ ಅದ್ವಿತೀಯತೆ !**

ಸನಾತನದ ಬಹುತೇಕ ಗ್ರಂಥಗಳಲ್ಲಿನ ಸುಮಾರು ಶೇ. ೨೦ ರಷ್ಟು ಬರವಣಿಗೆಗಳು ‘ಸೂಕ್ಷ್ಮದಿಂದ ಪಡೆದುಕೊಂಡ ದಿವ್ಯ ಜ್ಞಾನ’ವಾಗಿದ್ದು, ಪೃಥ್ವಿಯಲ್ಲಿ ಲಭ್ಯವಿರುವ ಜ್ಞಾನದ ತುಲನೆಯಲ್ಲಿ ಅದು ಅದ್ವಿತೀಯವಾಗಿದೆ !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಶ್ರೀ. ಗುರುದಾಸ ಖಂಡೇಪಾರಕರ ಮತ್ತು
ಶ್ರೀ. ರಾಜು ಸುತಾರ

**First Edition** : Hanuman Jayanthi, Kaliyug Varsh 5114
(6th April 2012)

**Third Edition** : Dhanatrayodashi, Kaliyug Varsh 5123
(2nd November 2021)

**Third Edition Second Reprint** : Deepavali, Kaliyug Varsh 5125
(14th November 2023)

Translated from the original Marathi text 'Utara Aani Manas Drusht (Vastu, Vahan aani Jhad yanna Drusht Na Lagnyasathicha Upayansaha)'
ಪ್ರಸ್ತುತ ಗ್ರಂಥವು ಹಿಂದಿ ಭಾಷೆಯಲ್ಲೂ ಲಭ್ಯವಿದೆ.

**ಅನುವಾದಕರು** : ಕು. ರಶ್ಮಿ ನಾಯಕ್, ಡಾ. ಪ್ರಕಾಶ ಘಾಳಿ,
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 95/-

**ISBN :** 978-81-953183-9-1 ॐ ಗ್ರಂಥ ಕ್ರ. : 160

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಗ್ರಂಥದ ಸಂಕಲನಕಾರರ ಪರಿಚಯ

# ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಅದ್ವಿತೀಯ ಕಾರ್ಯ ಮತ್ತು ವೈಶಿಷ್ಟ್ಯಗಳ ಸಂಕ್ಷಿಪ್ತ ಪರಿಚಯ !



೧. ಅಧ್ಯಾತ್ಮಪ್ರಸಾರಕ್ಕಾಗಿ 'ಸನಾತನ ಸಂಸ್ಥೆ'ಯ ಸ್ಥಾಪನೆ

೨. ಶೀಘ್ರ ಈಶ್ವರಪ್ರಾಪ್ತಿಗಾಗಿ 'ಗುರುಕೃಪಾಯೋಗ' ಎಂಬ ಸಾಧನಾಮಾರ್ಗದ ನಿರ್ಮಿತಿ : ಇದಕ್ಕನುಸಾರ ಸಾಧನೆ ಮಾಡಿ ೩.೯.೨೦೨೩ ರವರೆಗೆ ೧೨೫ ಸಾಧಕರು ಸಂತರಾಗಿದ್ದು, ೧,೦೪೬ ಸಾಧಕರು ಸಂತತ್ವದೆಡೆಗೆ ಮಾರ್ಗಕ್ರಮಣ ಮಾಡುತ್ತಿದ್ದಾರೆ.

೩. ಆಚಾರಧರ್ಮಪಾಲನೆ, ದೇವತೆಗಳು, ಸಾಧನೆ, ಆದರ್ಶ ರಾಷ್ಟ್ರನಿರ್ಮಾಣ, ಧರ್ಮರಕ್ಷಣೆ ಇತ್ಯಾದಿ ವಿವಿಧ ವಿಷಯಗಳ ಬಗ್ಗೆ ವಿಪುಲ ಗ್ರಂಥಗಳ ನಿರ್ಮಿತಿ

೪. ಹಿಂದುತ್ವವಾದಿ ವರ್ತಮಾನಪತ್ರಿಕೆ 'ಸನಾತನ ಪ್ರಭಾತ'ದ ಸಂಸ್ಥಾಪಕ-ಸಂಪಾದಕರು

೫. ಹಿಂದೂ ರಾಷ್ಟ್ರದ (ಈಶ್ವರೀ ರಾಜ್ಯದ) ಸ್ಥಾಪನೆಯ ಉದ್ಘೋಷ (೧೯೯೮)

೬. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಸಂತರು, ಸಂಪ್ರದಾಯಗಳು, ಹಿಂದುತ್ವವಾದಿಗಳು ಮುಂತಾದವರ ಸಂಘಟನೆ ಹಾಗೂ ಅವರಿಗೆ ಮಾರ್ಗದರ್ಶನ !

**(ಸಂಪೂರ್ಣ ಪರಿಚಯಕ್ಕಾಗಿ ಭೇಟಿ ನೀಡಿ 'www.Sanatan.org/Kannada')**

**ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಸಾಧಕರಿಗೆ ನೀಡಿದ ಭರವಸೆ !**

**ಸ್ಥೂಲದೇಹಕ್ಕಿಹುದು ಸ್ಥಳಕಾಲಗಳ ಪರಿಮಿತಿ ।**
**ಹೇಗಿರಲಿ ಸದಾ ಎಲ್ಲ ಕಡೆಗಳಲ್ಲಿ ॥**
**ಸನಾತನ ಧರ್ಮವಿಹುದು ನನ್ನ ನಿತ್ಯರೂಪ ।**
**ಆ ರೂಪದಲ್ಲಿರುವೆ ಎಲ್ಲ ಕಡೆಗಳಲ್ಲಿ ಸದಾ ॥**

*Jayant Balaji Athavale*
*17.5.1996*

## ಸನಾತನದ ಸೂಕ್ಷ್ಮಜ್ಞಾನ ಪಡೆಯುವ ಸಾಧಕರ ಅದ್ವಿತೀಯತೆ !



ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ

ಸೂಕ್ಷ್ಮಜ್ಞಾನವನ್ನು ಪಡೆಯುವ ಸಾಧಕರು ಪೃಥ್ವಿಯ ಮೇಲೆ ಎಲ್ಲಿಯೂ ಲಭ್ಯವಿರದ ಅಧ್ಯಾತ್ಮದಲ್ಲಿನ ವಿವಿಧ ವಿಷಯಗಳಲ್ಲಿನ ಆಳವಾದ ಶಾಸ್ತ್ರೀಯ ಜ್ಞಾನವನ್ನು ಸೂಕ್ಷ್ಮದಿಂದ ಪಡೆಯುತ್ತಾರೆ. ೨೦೦೩ ರಿಂದ ದೊರೆಯುತ್ತಿರುವ ಈ ಜ್ಞಾನವನ್ನು ಸಾಧಾರಣವಾಗಿ ಸನಾತನದ ೬೦ ಕ್ಕೂ ಹೆಚ್ಚಿನ ಗ್ರಂಥಗಳಲ್ಲಿ ತೆಗೆದುಕೊಳ್ಳಲಾಗಿದೆ. ಈಶ್ವರನಿಂದ ಸಿಗುವ ಸಾತ್ತ್ವಿಕ ಜ್ಞಾನವನ್ನು ಗ್ರಹಣ ಮಾಡಲು ಅವರಿಗೆ ಆಸುರೀ ಶಕ್ತಿಗಳ ಆಕ್ರಮಣವನ್ನೂ ಎದುರಿಸಬೇಕಾಗುತ್ತದೆ. ಹೀಗಿದ್ದರೂ ಅವರು ಗುರುಕೃಪೆಯ ಬಲದಿಂದ ಈ ಸೇವೆಯನ್ನು ಮಾಡುತ್ತಲೇ ಇದ್ದಾರೆ.

---

### ಗ್ರಂಥದ ಅನುಕ್ರಮಣಿಕೆ

(ಕೆಲವು ಮಹತ್ವಪೂರ್ಣ ಅಂಶಗಳನ್ನು ಕೊಡಲಾಗಿದೆ)


**೧. ನಿವಾಳಿಸುವುದು (ಇಳಿ, ಇಳಿ ನೀಡುವುದು) ೧೦**

೧ ಅ. ನಿವಾಳಿಸುವುದರ ಹಿಂದಿನ ಶಾಸ್ತ್ರ ಮತ್ತು ಆಗುವ ಪ್ರಕ್ರಿಯೆ ೧೦

೧ ಈ. ನಿವಾಳಿಸುವ (ಇಳಿ ಕೊಡುವ) ಎರಡು ಪದ್ಧತಿಗಳು ೧೧

೧ ಉ. ನಿವಾಳಿಸುವ (ಇಳಿ ಕೊಡುವ) ಕೃತಿಗಳ ಹಿಂದಿನ ಶಾಸ್ತ್ರ

* ಕೆಟ್ಟ ಶಕ್ತಿಗಳ ವೈಶಿಷ್ಟ್ಯಗಳಿಗನುಸಾರ ನೀಡಬೇಕಾದ ಇಳಿ ೨೧
* ಇಳಿಯನ್ನು ಮೂರು ದಾರಿಗಳು ಕೂಡುವಲ್ಲಿ ಏಕೆ ಇಡುತ್ತಾರೆ ? ೨೬
* ನಿವಾಳಿಸಿರುವುದನ್ನು ನೀರಿನಲ್ಲಿ ಏಕೆ ವಿಸರ್ಜಿಸುತ್ತಾರೆ ? ೩೧

೧ ಊ. ವಿದೇಶಗಳಲ್ಲಿನ ಮತ್ತು ಹಿಂದೂ ಧರ್ಮದಲ್ಲಿನ ನಿವಾಳಿಸುವ ಪದ್ಧತಿ ಮತ್ತು ಅವುಗಳಲ್ಲಿನ ವ್ಯತ್ಯಾಸ ೩೨

**೨. ವಾಸ್ತುವನ್ನು ದೃಷ್ಟಿ ತಗಲುವುದರಿಂದ ರಕ್ಷಿಸುವುದು ೪೧**

೨ ಅ. ಒಬ್ಬ ವ್ಯಕ್ತಿಯನ್ನು ತ್ರಾಸದಾಯಕ ಸ್ಪಂದನಗಳಿಂದ ಬಾಧಿಸುವುದಕ್ಕಿಂತ ಯಾವುದಾದರೊಂದು ವಾಸ್ತುವನ್ನು ಬಾಧಿಸುವುದು ಸುಲಭವಾಗಿರುವುದರ ಕಾರಣಗಳು ೪೧

೨ ಇ. ತ್ರಾಸದಾಯಕ ವಾಸ್ತುವಿನಿಂದ ವ್ಯಕ್ತಿಯ ಮೇಲಾಗುವ ಪರಿಣಾಮ ೪೨

೨ ಈ. ವಾಸ್ತುಗಳಿಗೆ ದೃಷ್ಟಿ ತಗಲಬಾರದೆಂದು ಮಾಡಬೇಕಾದ ಕೆಲವು ಉಪಾಯಗಳು ೪೩

**೩. ವಾಹನವನ್ನು ದೃಷ್ಟಿ ತಗಲುವುದರಿಂದ ರಕ್ಷಿಸುವುದು ೪೯**

* ಪ್ರವಾಸದಲ್ಲಿ ಕೆಟ್ಟ ಶಕ್ತಿಗಳು ತೊಂದರೆ ಕೊಡಬಾರದೆಂದು ಪ್ರವಾಸಕ್ಕೆ ಹೊರಡುವ ಮೊದಲೇ ವಾಹನದ ದೃಷ್ಟಿಯನ್ನು ತೆಗೆಯಬೇಕು ೫೦

**೪. ಗಿಡಮರಗಳಿಗೆ ದೃಷ್ಟಿ ತಗಲುವುದರಿಂದ ರಕ್ಷಿಸುವುದು ೫೨**

೪ ಅ. ಗಿಡಮರಗಳಿಗೆ ತಗಲಿರುವ ದೃಷ್ಟಿಯ ತೀವ್ರತೆ ಗುರುತಿಸುವ ಕೆಲವು ಲಕ್ಷಣಗಳು ೫೨

೪ ಆ. ಗಿಡಮರಗಳಿಗೆ ದೃಷ್ಟಿ ತಗಲಬಾರದೆಂದು ಅವುಗಳಿಗೆ ವಿವಿಧ ವಸ್ತುಗಳನ್ನು ನೇತಾಡಿಸುವುದು ೫೩

೪ ಈ. ಗಿಡಮರಗಳು ಫಲದಾಯಕವಾಗಬೇಕೆಂದು ಮಾಡಬೇಕಾದ ಇತರ ಆಧ್ಯಾತ್ಮಿಕ ಉಪಾಯಗಳು ಮತ್ತು ಚೈತನ್ಯಮಯ ಪರಿಸರದ ಮಹತ್ವ ೫೬

**೫. ಸ್ಥೂಲದಿಂದ ದೃಷ್ಟಿ ತೆಗೆಯುವುದು ಮತ್ತು ಸೂಕ್ಷ್ಮದಿಂದ ಮಾನಸ ದೃಷ್ಟಿ ತೆಗೆಯುವುದು ೫೭**

**೬. ಮಾನಸ ದೃಷ್ಟಿ ತೆಗೆಯುವುದು ೫೮**

೬ ಅ. ಮಾನಸ ದೃಷ್ಟಿ ತೆಗೆಯುವ ಪದ್ಧತಿಯನ್ನು ಯಾವಾಗ ಉಪಯೋಗಿಸಬೇಕು ? ೫೮

೬ ಆ. ಮಾನಸ ಉಪಾಯವನ್ನು ಮಾಡುವುದರ ಮಹತ್ವ ಮತ್ತು ಲಾಭ ೫೮

**೭. ನಿವಾಳಿಸುವುದು ಮತ್ತು ದೃಷ್ಟಿಯನ್ನು ತೆಗೆಯುವುದರ ಮಿತಿ ಮತ್ತು ಸಾಧನೆಯ ಮಹತ್ವ ೭೨**

**卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೭೩**

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೭೭**

ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಓರ್ವ ಆಧ್ಯಾತ್ಮಿಕ ಉತ್ತರಾಧಿಕಾರಿ ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳರಿಗೆ ಮುಂಚೆ ಸೂಕ್ಷ್ಮಜಗತ್ತಿನ ಓರ್ವ ವಿದ್ವಾಂಸ ಅಥವಾ ಗುರುತತ್ತ್ವದ ಮಾಧ್ಯಮದಿಂದ ಜ್ಞಾನ ದೊರಕುತ್ತಿತ್ತು.

## ಮನೋಗತ

ಭೂತಪ್ರೇತಗಳಂತಹ ಅದೃಶ್ಯ ಶಕ್ತಿಗಳ ಸಂಶೋಧನೆಯನ್ನು ಪಾಶ್ಚಾತ್ಯರು ಇತ್ತೀಚಿಗಿನ ಕಾಲದಲ್ಲಿ ಮಾಡಿದ್ದಾರೆ. ಇಂದು ಭೂತಗಳ ಬಗೆಗಿನ ಮಾಹಿತಿಯನ್ನು ನೀಡುವ ಅನೇಕ ಜಾಲತಾಣಗಳಿವೆ. ನಮ್ಮ ಹಿಂದೂ ಪೂರ್ವಜರು ಸಾವಿರಾರು ವರ್ಷಗಳ ಹಿಂದೆಯೇ ಈ ಅದೃಶ್ಯ ಶಕ್ತಿಗಳ ಬಗೆಗಿನ ಮಾಹಿತಿಯನ್ನು ನೀಡಿದ್ದಾರೆ, ಇಷ್ಟೇ ಅಲ್ಲದೇ ಈ ಶಕ್ತಿಗಳ ತೊಂದರೆಗಳಿಂದ ರಕ್ಷಣೆಯನ್ನು ಪಡೆಯಲು ಸುಲಭ ಉಪಾಯಪದ್ಧತಿಗಳನ್ನೂ ಹೇಳಿದ್ದಾರೆ. 'ನಿವಾಳಿಸು'ವುದು ಅದರಲ್ಲಿನ ಒಂದು ಪದ್ಧತಿಯಾಗಿದೆ.

ಭೂಲೋಕದಲ್ಲಿರುವಾಗ ಇಚ್ಛೆ ಮತ್ತು ವಾಸನೆಗಳು ಅತೃಪ್ತವಾಗಿರುವ ನಮ್ಮ ಪೂರ್ವಜರು ಅಥವಾ ಇತರ ಜೀವಗಳು ಇಹಲೋಕವನ್ನು ಬಿಟ್ಟು ಹೋದನಂತರ ನಮಗೆ ತೊಂದರೆಗಳನ್ನು ಕೊಡುತ್ತಾರೆ ಎಂದು ಹೇಳಿದರೆ, ನಂಬಲು ಸಾಧ್ಯವಿಲ್ಲ ಅಲ್ಲವೇ ? ಆದರೆ ಈ ಸತ್ಯವನ್ನು ತಿಳಿದುಕೊಳ್ಳಲು ಇದರ ಹಿಂದಿನ ಕಾರಣವನ್ನು ತಿಳಿದುಕೊಳ್ಳಬೇಕಾಗುತ್ತದೆ. ಅತೃಪ್ತ ಪೂರ್ವಜರ ಆತ್ಮಗಳು ಅಥವಾ ಆ ಆತ್ಮಗಳ ಮೇಲೆ ಹಿಡಿತ ಸಾಧಿಸಿದ ಕೆಟ್ಟ ಶಕ್ತಿಗಳು ತಮ್ಮ ಆಹಾರವಾಸನೆಯ ತೃಪ್ತಿಗಾಗಿ ಅಥವಾ ಇತರ ವಾಸನೆಗಳ ಪೂರ್ತಿಗಾಗಿ ಆಹಾರವಾಸನೆಯ ಮಾಧ್ಯಮದಿಂದ ಅಥವಾ ಇತರ ರೀತಿಗಳಲ್ಲಿ (ಉದಾ. ಕನಸಿನಲ್ಲಿ ಪದೇಪದೇ ಹಾವು ಕಾಣಿಸುವುದು) ತೊಂದರೆಗಳನ್ನು ಕೊಡುತ್ತಾರೆ. ಕಾರಣವಿಲ್ಲದೆ ಅತಿಯಾಗಿ ಹಸಿವಾಗುವುದು, ಆಗಾಗ ವಿವಿಧ ರೀತಿಯ ಅನ್ನಪದಾರ್ಥಗಳನ್ನು ತಿನ್ನುವ ಇಚ್ಛೆಯಾಗುವುದು, ಹಸಿವು ಕಡಿಮೆಯಾಗುವುದು, ಒಮ್ಮೆಲೇ ಸಾರಾಯಿ-ಸಿಗರೇಟುಗಳಂತಹ ವ್ಯಸನ ತಗಲುವುದು ಇಂತಹ ಆಹಾರ ವಾಸನೆಗೆ ಸಂಬಂಧಪಟ್ಟ ಲಕ್ಷಣಗಳನ್ನು ನಾವು ಕೆಲವು ಸಲ ಅನುಭವಿಸುತ್ತೇವೆ; ಆದರೆ 'ಕೆಟ್ಟ ಶಕ್ತಿಗಳ ತೊಂದರೆಗಳಿಂದ ಹೀಗೆ ಆಗುತ್ತದೆ' ಎಂಬ ಕಲ್ಪನೆಯೂ ನಮಗೆ ಇರುವುದಿಲ್ಲ. ಇದಕ್ಕೆ ಉಪಾಯವೆಂದು ಅತೃಪ್ತ ಪೂರ್ವಜರ ಲಿಂಗದೇಹಗಳನ್ನು ಅಥವಾ ಇತರ ಕೆಟ್ಟ ಶಕ್ತಿಗಳನ್ನು ತೃಪ್ತಿಪಡಿಸುವಂತಹ ಘಟಕಗಳನ್ನು ತೊಂದರೆಯಿರುವ ವ್ಯಕ್ತಿಯ ಮೇಲಿನಿಂದ ನಿವಾಳಿಸಬೇಕು. ಆ ಘಟಕಗಳನ್ನು ವ್ಯಕ್ತಿಯ ಮೇಲಿನಿಂದ ನಿವಾಳಿಸುವುದರಿಂದ ಅವನ ತೊಂದರೆಗಳು ಕಡಿಮೆಯಾಗಲು ಸಹಾಯವಾಗುತ್ತದೆ. ನಿವಾಳಿಸಲು ಯಾವ ಪದಾರ್ಥಗಳನ್ನು ಅಥವಾ ಘಟಕಗಳನ್ನು ಉಪಯೋಗಿಸಬೇಕು, ನಿವಾಳಿಸುವ ಪದ್ಧತಿಗಳು ಯಾವುವು, ನಿವಾಳಿಸಿರುವುದನ್ನು ಮೂರುದಾರಿಯ ಮೇಲೆ ಏಕೆ ಇಡಬೇಕು, ನಿವಾಳಿಸಿರುವುದನ್ನು ನೀರಿನಲ್ಲಿ ಏಕೆ ಮತ್ತು ಯಾವಾಗ ವಿಸರ್ಜಿಸಬೇಕು ಇಂತಹ ಅನೇಕ ಪ್ರಶ್ನೆಗಳ ಅಧ್ಯಾತ್ಮಶಾಸ್ತ್ರೀಯ ಕಾರಣಗಳನ್ನು ಈ ಗ್ರಂಥದಲ್ಲಿ ನೀಡಲಾಗಿದೆ.

ವ್ಯಕ್ತಿಯು ತ್ರಾಸದಾಯಕ ಸ್ಪಂದನಗಳಿಂದಾಗಿ ತೊಂದರೆಗೊಳಗಾಗುವುದೆಂದರೆ,

ಆತನಿಗೆ ‘ದೃಷ್ಟಿ ತಗಲುವುದು’. ಹೇಗೆ ವ್ಯಕ್ತಿಗೆ ದೃಷ್ಟಿ ತಗಲುತ್ತದೆಯೋ, ಹಾಗೆಯೇ ವಾಸ್ತು, ವಾಹನ ಮತ್ತು ಗಿಡಮರಗಳಿಗೂ ದೃಷ್ಟಿ ತಗಲುತ್ತದೆ. ಮನೆಗೆ ದೃಷ್ಟಿ ತಗಲಿದರೆ ಮನೆಯಲ್ಲಿ ವಾಸಿಸುವವರಿಗೆ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ತೊಂದರೆಗಳಾಗುತ್ತವೆ. ವಾಹನಕ್ಕೆ ದೃಷ್ಟಿ ತಗಲಿದರೆ ಅಪಘಾತವಾಗುವ ಸಾಧ್ಯತೆ ಯಿರುತ್ತವೆ. ಮರಕ್ಕೆ ದೃಷ್ಟಿ ತಗಲಿದರೆ ಅದರ ಫಲಗಳ ಮೇಲೆ ವಿಪರೀತ ಪರಿಣಾಮವಾಗುತ್ತದೆ, ಕೆಲವು ಸಲ ಆ ಮರ ಸಾಯುತ್ತದೆ (ಒಣಗಿ ಬಿದ್ದು ಹೋಗು ತ್ತದೆ). ವಾಸ್ತು, ವಾಹನ ಮತ್ತು ಗಿಡ ಮರಗಳಿಗೆ ದೃಷ್ಟಿ ತಗಲಬಾರದೆಂದು ಯಾವ ಉಪಾಯಗಳನ್ನು ಮಾಡಬೇಕು, ಹಾಗೆಯೇ ಅವುಗಳಿಗೆ ದೃಷ್ಟಿ ತಗಲಿದರೆ ಅದನ್ನು ತೆಗೆಯುವ ಪದ್ಧತಿ ಇತ್ಯಾದಿಗಳನ್ನೂ ಈ ಗ್ರಂಥದಲ್ಲಿ ಕೊಡಲಾಗಿದೆ.

ನಿವಾಳಿಸುವುದು, ದೃಷ್ಟಿಯನ್ನು ತೆಗೆಯುವುದು ಇಂತಹ ಪದ್ಧತಿಗಳು ಕೆಟ್ಟ ಶಕ್ತಿಗಳ ತೊಂದರೆಗಳನ್ನು ದೂರಗೊಳಿಸುವ ಸ್ಥೂಲ ಪದ್ಧತಿಗಳಾಗಿವೆ. ದೃಷ್ಟಿಯನ್ನು ತೆಗೆಯಲು ಬೇಕಾಗುವ ವಸ್ತುಗಳು, ದೃಷ್ಟಿಯನ್ನು ತೆಗೆಯುವ ವ್ಯಕ್ತಿ ಮತ್ತು ದೃಷ್ಟಿ ಯನ್ನು ಇಳಿಸಿ (ನಿವಾಳಿಸಿ) ವಸ್ತುಗಳನ್ನಿಡುವ ಸ್ಥಳ ಇವು ಉಪಲಬ್ಧವಿಲ್ಲದಿದ್ದರೆ ಏನು ಮಾಡಬೇಕು ? ‘ತಮ್ಮ ಉಪಾಸ್ಯದೇವತೆಗೆ ದೃಷ್ಟಿಯನ್ನು ತೆಗೆಯಲು ಪ್ರಾರ್ಥನೆ ಯನ್ನು ಮಾಡಿ, ದೇವತೆಯೇ ನಮ್ಮ ದೃಷ್ಟಿಯನ್ನು ತೆಗೆಯುತ್ತಿದ್ದಾಳೆ’, ಎಂದು ಕಲ್ಪನೆ ಯನ್ನು ಮಾಡಿ ಆ ಕೃತಿಯ ಸ್ಮರಣೆಯನ್ನು ಮಾಡಬೇಕು, ಇದು ಇದರ ಮೇಲಿನ ಉಪಾಯವಾಗಿದೆ. ಇದು ಮಾನಸ (ಮನಸ್ಸಿನಿಂದ) ದೃಷ್ಟಿ ತೆಗೆಯುವ ಪದ್ಧತಿಯಾಗಿದೆ. ಮನಸ್ಸಿನಿಂದ ದೃಷ್ಟಿಯನ್ನು ತೆಗೆಯುವುದು ಹೆಚ್ಚು ಸೂಕ್ಷ್ಮ ಉಪಾಯವಾಗಿರುವುದ ರಿಂದ ದೃಷ್ಟಿಯು ಸರಿಯಾಗಿ ಹೋಗಲು ದೃಷ್ಟಿ ತೆಗೆಯುವವನಲ್ಲಿ ಈಶ್ವರನ ಬಗ್ಗೆ ಭಾವ ಮತ್ತು ತಳಮಳವಿರಬೇಕು ಅಥವಾ ಅವನ ಆಧ್ಯಾತ್ಮಿಕ ಮಟ್ಟ ಶೇ. ೫೦ ಕ್ಕಿಂತ ಹೆಚ್ಚಿಗಿರುವುದು ಆವಶ್ಯಕವಾಗಿದೆ. ಈ ಗ್ರಂಥದಲ್ಲಿ ಮಾನಸ ದೃಷ್ಟಿಯನ್ನು ತೆಗೆಯುವ ಪದ್ಧತಿಗಳನ್ನೂ ಕೊಡಲಾಗಿದೆ.

‘ಉಪ್ಪು-ಸಾಸಿವೆ, ತೆಂಗಿನಕಾಯಿ, ಲಿಂಬೆ ಇತ್ಯಾದಿಗಳಿಂದ ದೃಷ್ಟಿ ಹೇಗೆ ತೆಗೆಯ ಬೇಕು ?’ ಎಂಬ ನಮ್ಮ ಗ್ರಂಥದಲ್ಲಿ, ಯಾವ ವ್ಯಕ್ತಿಯ ದೃಷ್ಟಿಯನ್ನು ತೆಗೆಯ ಬೇಕಾಗಿದೆಯೋ, ಅವನ ಮೇಲಿನಿಂದ ದೃಷ್ಟಿ ತೆಗೆಯುವ ವಸ್ತುಗಳನ್ನು ಏಕೆ ನಿವಾಳಿಸ ಬೇಕು, ದೃಷ್ಟಿಯನ್ನು ತೆಗೆಯುವಾಗ ಭಾವವು ಏಕೆ ಮಹತ್ವದ್ದಾಗಿರುತ್ತದೆ, ದೃಷ್ಟಿ ತೆಗೆಯುವ ವ್ಯಕ್ತಿಯ ಮೇಲೆ ದೃಷ್ಟಿ ಹೋಗುವುದು ಹೇಗೆ ಅವಲಂಬಿಸಿರುತ್ತದೆ, ಇಂತಹ ಅನೇಕ ಪ್ರಶ್ನೆಗಳ ಉತ್ತರಗಳನ್ನು ನೀಡಲಾಗಿದೆ. ಈ ವಿಷಯಗಳು ಪುನಃ ಮರುಕಳಿಸಬಾರದೆಂದು ಈ ಉತ್ತರಗಳನ್ನು ನಾವು ಈ ಗ್ರಂಥದಲ್ಲಿ ನೀಡಿಲ್ಲ.

ಅಧ್ಯಾತ್ಮವು ಅನುಭೂತಿಯ ಶಾಸ್ತ್ರವಾಗಿದೆ. ಅಧ್ಯಾತ್ಮದಲ್ಲಿ ಹೇಳಲಾಗಿರುವ ಯಾವುದಾದರೊಂದು ಕೃತಿಯ ಬಗ್ಗೆ ಅನುಭೂತಿಯು ಬಂದರೆ, ಆ ಕೃತಿಯ ಹಿಂದಿನ ಶಾಸ್ತ್ರದ ಮೇಲೆ ಕೂಡಲೇ ಶ್ರದ್ಧೆ ನಿರ್ಮಾಣವಾಗುತ್ತದೆ. ಸಾಧಕರಿಗೆ ನಿವಾಳಿಸುವುದು, ಮಾನಸ ದೃಷ್ಟಿ ಇಂತಹ ಉಪಾಯಗಳ ಸಂದರ್ಭದಲ್ಲಿ ಬಂದಿರುವ ವಿವಿಧ ಅನುಭೂತಿಗಳನ್ನು ಗ್ರಂಥದಲ್ಲಿ ಪ್ರಕಟಿಸಿರುವ ಉದ್ದೇಶವೂ ವಾಚಕರ ಶ್ರದ್ಧೆಯನ್ನು ಹೆಚ್ಚಿಸುವುದೇ ಆಗಿದೆ.

ಈ ಗ್ರಂಥದಲ್ಲಿ ನೀಡಿರುವ ಉಪಾಯಗಳನ್ನು ಮಾಡಿ ಆದಷ್ಟು ಹೆಚ್ಚು ಜನರ ಕೆಟ್ಟ ಶಕ್ತಿಗಳ ತೊಂದರೆಗಳು ದೂರವಾಗಲೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !

**– ಸಂಕಲನಕಾರರು**

## ಪರಾತ್ಪರ ಗುರು ಡಾ. ಜಯಂತ ಆಠವಲೆಯವರ 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನ ಕುರಿತಾದ ವಿವೇಚನೆ !

೧೩.೭.೨೦೨೨ ರಿಂದ 'ಸಪ್ತರ್ಷಿ ಜೀವನಾಡಿಪಟ್ಟಿ'ಯ ವಾಚನದ ಮಾಧ್ಯಮ ದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು 'ಸಚ್ಚಿದಾನಂದ ಪರಬ್ರಹ್ಮ' ಎಂದು ಸಂಬೋಧಿಸಲಾಗುತ್ತಿದೆ. ಇದಕ್ಕೂ ಮೊದಲು ಗ್ರಂಥಗಳಲ್ಲಿ ಅವರನ್ನು 'ಪ.ಪೂ. (ಪರಮ ಪೂಜ್ಯ)' ಮತ್ತು 'ಪರಾತ್ಪರ ಗುರು' ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ. ಇದಕ್ಕನುಸಾರ ಪ್ರಸ್ತುತ ಗ್ರಂಥದ ಮುಖಪುಟದಲ್ಲಿ ಮತ್ತು ಗ್ರಂಥದಲ್ಲಿ ಆವಶ್ಯಕವಿರುವ ಕಡೆ ಹೀಗೆ ಉಲ್ಲೇಖಿಸಲಾಗಿದೆ.

## ಸನಾತನದ ಇಬ್ಬರೂ ಸದ್ಗುರುಗಳ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಗನುಸಾರ ೧೩.೫.೨೦೨೦ ರಿಂದ ಸದ್ಗುರು (ಸೌ.) ಬಿಂದಾ ನೀಲೇಶ ಸಿಂಗಬಾಳರನ್ನು 'ಶ್ರೀಸತ್‌ಶಕ್ತಿ (ಸೌ.) ಬಿಂದಾ ನೀಲೇಶ ಸಿಂಗಬಾಳ' ಮತ್ತು ಸದ್ಗುರು (ಸೌ.) ಅಂಜಲಿ ಮುಕುಲ ಗಾಡಗೀಳರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ' ಎಂದು ಸಂಬೋಧಿಸಲಾಗುತ್ತಿದೆ. ಈ ಇಬ್ಬರೂ ಸಂತರು ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾಗಿದ್ದಾರೆ.